**ಓ.ಎಸ್. ನಂ. 146/2022** **ಪಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 4.11.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಎನ್.ಆರ್.ಎನ್ ವಕೀಲರಿಂದಃ</u>

ನಾನು ನರಸೀಪುರ ಗ್ರಾಮದ ಸರ್ವೆ ನಂ.20/1 ಹಾಗೂ 20/2 ಕ್ಕೆ ಸಂಬಂಧಿಸಿದಂತೆ ಒಟ್ಟು 18-11 ಎಕರೆ ಆಸ್ತಿಗೆ ದಾವೆ ಹಾಕಿರುತ್ತೇನೆ. ನಾನು ಪಿ.ಯು.ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕಂದಾಯ ದಾಖಲೆಗಳ ಬಗ್ಗೆ ಗೊತ್ತಿರುತ್ತದೆ. ದಾವ ಎ ಷೆಡ್ಯೂಲ್ 1 ನೇ ಐಟಂ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ ಪಟೇಲ್ ನಿಂಗೇಗೌಡರ ಜಮೀನು, ಪಶ್ಚಿಮಕ್ಕೆ ಗೋಮಾಳ, ಉತ್ತರಕ್ಕೆ ಮಹದೇವಪ್ಪರವರ ಜಮೀನು, ದಕ್ಷಿಣಕ್ಕೆ ಗೋಮಾಳ ಇರುತ್ತದೆ. ದಾವ ಎ ಷೆಡ್ಯೂಲ್ 2 ನೇ ಐಟಂ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ ನಾಗರತ್ನಮ್ಮರವರ ಜಮೀನು, ಪಶ್ಚಿಮಕ್ಕೆ ಗೋಮಾಳ, ಉತ್ತರಕ್ಕೆ ಚಾಮರಾಜುರವರ ಜಮೀನು, ದಕ್ಷಿಣಕ್ಕೆ ಗೋಮಾಳ ಇರುತ್ತದೆ. ನಾನು ಎರಡು ಸ್ವತ್ತಗಳಿಗೆ ದಾವೆ ಹಾಕಿರುತ್ತೇನೆ. ನನ್ನ ತಂದೆಯ ಹೆಸರು ಕೆಂಪಮಾಲೇಗೌಡ ಆಗಿರುತ್ತದೆ. ದಾವಆಸ್ತಿಗಳು ನನ್ನ ತಂದೆಗೆ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿದಾರರು ದತ್ತು ಹೋಗಿರುವುದರಿಂದ ಬಂದಿರುತ್ತದೆ ಎನ್ನುವರು. ನನ್ನ ತಂದೆಯವರು ಕೆಂಪಮಾಲೇಗೌಡರ ಮನೆಗೆ ದತ್ತು ಹೋಗಿರುತ್ತಾರೆ. ನನ್ನ ತಂದೆಯವರು ದತ್ತು ಹೋಗಿರುವ ಕೆಂಪಮಾಲೇಗೌಡರಿಗೆ 18-11 ಎಕರೆ ಜಮೀನು ಇರುತ್ತದೆ. ನನ್ನ ತಂದೆ ದತ್ತು ಹೋಗಿರುವ ದಾಖಲಾತಿಗಳು ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನನ್ನ ದಾವಪತ್ರದಲ್ಲಿ ದಾವಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದು ಬರೆದಿರುವುದು ಸುಳ್ಳು ಎಂದರೆ ಸರಿಯಲ್ಲ.

ನನಗೆ ಒಬ್ಬ ಸಹೋದರ ಹಾಗೂ 3 ಜನ ಸಹೋದರಿಯರು ಇರುತ್ತಾರೆ. ದಾವಆಸ್ತಿಗಳು ನಮಗೆ ಸೇರಬೇಕು ಎಂದು ದಾವೆ ಹಾಕಿರುತ್ತೇನೆ. 18-11 ಎಕರೆ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿದ್ದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಚಾಮೇಗೌಡರ ಮಗ ಮಾದೇಗೌಡ ಯಾರು ಎಂದರೆ ನಮ್ಮ ಊರಿನವರಾಗಿದ್ದು, ನಮಗೂ ಅವರಿಗೂ ಸಂಬಂಧವಿರುವುದಿಲ್ಲ ಎನ್ನುವರು. ಸದರಿ ಚಾಮೇಗೌಡರ ಮಗ ಮಾದೇಗೌಡರಿಗೆ ನನ್ನ ತಾತ ಕೆಂಪಮಾಲೇಗೌಡರು ಸರ್ವೆ ನಂ.20/2 ರಲ್ಲಿ 4-20 ಎಕರೆ ಆಸ್ತಿಯನ್ನು 1933 ರಲ್ಲಿ ಮಾರಾಟ ಮಾಡಿರುತ್ತಾರೆ. ದಿನಾಂಕ 20.3.1933 ರಲ್ಲಿ ಚಾಮೇಗೌಡರ ಮಗ ಮಾದೇಗೌಡರಿಗೆ ಕೆಂಪಮಾಲೇಗೌಡರು 9-10 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಕೆಂಪಮಾಲೇಗೌಡರ ಜನಕ ತಂದೆಯ ಹೆಸರು ಮರೀಗೌಡ ಆಗಿರುತ್ತದೆ. ನನ್ನ ತಂದೆ ದತ್ತು ಹೋಗಿದ್ದಾರೆ ಎನ್ನುವ ಕೆಂಪಮಾಲೇಗೌಡರ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ದತ್ತು ಹೋಗಿದ್ದಾರೆ ಎನ್ನುವ ಕೆಂಪಮಾಲೇಗೌಡರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಕೆಂಪಮಾಲೇಗೌಡರು ಚಾಮೇಗೌಡರ ಮಗ ಮಾದೇಗೌಡರಿಗೆ ದಿನಾಂಕ 17.5.1936 ರಂದು 4-20 ಎಕರೆ

ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನನ್ನ ದಾವಪತ್ರದಲ್ಲಿ ಸದರಿ ಚಾಮೇಗೌಡರ ಮಗ ಮಾದೇಗೌಡರವರು ಅವರ ಮಕ್ಕಳಿಗೆ ನೋಂದಾಯಿತ ವಿಭಾಗಪತ್ರ ಮಾಡಿಕೊಟ್ಟಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಯಾವ ಯಾವ ಸರ್ವೆ ನಂಬರಿನಲ್ಲಿ ಯಾವ ಮಕ್ಕಳಿಗೆ ಅವರು ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಚಾಮೇಗೌಡರ ಮಗ ಮಾದೇಗೌಡರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ನನ್ನ ದಾವಪತ್ರದಲ್ಲಿ ಸದರಿ ಮಾದೇಗೌಡರು 1974 ರಲ್ಲಿ ಸರ್ವೆ ನಂ.20/1 ರಲ್ಲಿ 8-13 ಎಕರೆ ಜಮೀನನ್ನು 1 ನೇ ಪ್ರತಿವಾದಿಗೆ ಹಾಗೂ 1936 ರಲ್ಲಿ ಕ್ರಯಕ್ಕೆ ಪಡೆದ ಸರ್ವೆ ನಂ.20 ರ 4-20 ಎಕರೆ ಬದಲಾಗಿ 5-20 ಎಕರೆ ಜಮೀನನ್ನು 4 ನೇ ಪ್ರತಿವಾದಿಗೆ ಹಿಸ್ಸೆಗೆ ನೀಡಿರುತ್ತಾರೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ಸದರಿ ವಿಚಾರವನ್ನು ನನ್ನ ತಂದೆ ನನಗೆ ಹೇಳಿರುತ್ತಾರೆ. ವಾದಿಗಳು ಮತ್ತು ಪ್ರತಿವಾದಿಯರು ಸೇರಿ ಡಿ.ಡಿ.ಎಲ್.ಆರ್ ರವರ ಮುಂದೆ ಮೇಲ್ಮನವಿ 38/2020-21 ರಂತೆ ಪೋಡಿ ಹಾಗೂ ದುರಸ್ತಿಗೆ ಅರ್ಜಿ ನೀಡಿರುತ್ತೇವೆ ಎಂದರೆ ಸಾಕ್ಷಿದಾರರು ವಾದಿಯರು ಅರ್ಜಿ ನೀಡಿರುವುದಿಲ್ಲ ಎನ್ನುವರು.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.